**ದಿನಾಂಕ:24-03-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ.ಬಿ ಎಸ್ ಎ ವಕೀಲರಿಂದ:**

ನನ್ನ ತಂದೆ ಬಸನಗೌಡ ಪಾಟೀಲರವರು 1994 ಅಥವಾ 1996 ರಂದು ಮೃತಪಟ್ಟಿದ್ದಾರೆ. ನನ್ನ ತಂದೆ ದಿಃ24-08-1996 ರಂದು ಮೃತಪಟ್ಟಿರುತ್ತಾರೆ. ನನ್ನ ತಂದೆಗೆ ಮೂರು ಜನ

ಮಕ್ಕಳಿದ್ದು, ನಾನು ಹಿರಿಯವನಾಗಿರುತ್ತೇನೆ. ನನ್ನ ಜನ್ಮ ದಿನಾಂಕ 19-12-1984 ಆಗಿರುತ್ತದೆ. ನನ್ನ ತಂದೆ ಮೃತಪಡುವ ಕಾಲಕ್ಕೆ ನಾನು ಮತ್ತು ನನ್ನ ಸಹೋದರಿಯರು ಅಲ್ಪವಯಿಗಳಾಗಿದ್ದವು. ನನ್ನ ತಂದೆ ಮೃತಪಟ್ಟ ನಂತರ ಮೊದಲ ಎರಡು ವರ್ಷ ನನ್ನ ಮಾವ ಎಸ್ ಪಿ ಹೊಂಬಳಿರವರು ಆ ನಂತರ ನನ್ನ ಚಿಕ್ಕಪ್ಪಂದಿರು ನಮ್ಮನ್ನು ನೋಡಿಕೊಂಡರು. ಆ ಸಂದರ್ಭದಲ್ಲಿ 1 ನೇ ವಾದಿ ನನ್ನ ತಾಯಿ ಸಹ ನಮ್ಮ ಜೊತೆ ಇದ್ದರು. ನನ್ನ ತಾಯಿಯ ತವರು ಮನೆ ಬಾಗಲಕೋಟೆ ಜಿಲ್ಲೆಯ ಕೆರೂರು ಗ್ರಾಮವಾಗಿರುತ್ತದೆ.

ದಾವಾ ಆಸ್ತಿಗಳು ನಮ್ಮ ಮೂಲತಃ ನಮ್ಮ ಅಜ್ಜ ಗೆದಿಗೆಪ್ಪಗೌಡನಿಗೆ ಸೇರಿದ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಗಾಜಿಪುರ ಮತ್ತು ಕೊಪ್ಪರಸಿಕೊಪ್ಪ ಗ್ರಾಮದಲ್ಲಿ ವ್ಯವಸಾಯದ ಜಮೀನುಗಳು ಇದ್ದವು. ನನ್ನ ಅಜ್ಜನಿಗೆ ಎಷ್ಟು ಎಕರೆ ಜಮೀನಿದೆ ಎಂಬುದು ನನಗೆ ಗೊತ್ತಿಲ್ಲ. ಆದರೆ ನನ್ನ ತಂದೆ ಹೆಸರಿನಲ್ಲಿ ಎಂಟುವರೆ ಎಕರೆ ತೋಟ, ಅದು ನನ್ನ ತಾಯಿಯ ಹೆರಿನಲ್ಲಿದೆ, ಅದೇ ರೀತಿ ನನ್ನ ತಂದೆಯ ಹೆಸರಿನಲ್ಲಿ 11 ಎಕಟೆ ವ್ಯವಸಾಯದ ಜಮೀನಿದೆ. ಈ ಎರಡು ಆಸ್ತಿಗಳು ನನ್ನ ಅಜ್ಜನ ಆಸ್ತಿಗಳು ಆಗಿರಬಹುದು, ಆದರೆ ನನಗೆ ಗೊತ್ತಿಲ್ಲ. 1974-75 ನೇ ಸಾಲಿನಲ್ಲಿ ಹಾವೇರಿ ನ್ಯಾಯಾಲಯದಲ್ಲಿ ಆದ ಹಿಸ್ಸಾ ಡಿಕ್ರಿಯ ಪ್ರಕಾರ ಸರ್ವೇ ನಂಬರ 10/1 ರಲ್ಲಿ 1 ಎಕರೆ 31 ಗುಂಟೆ, 10/2 ರಲ್ಲಿ 1 ಎಕರೆ, 54/2 ರಲ್ಲಿ 6 ಎಕರೆ 19 ಗುಂಟೆ ಜಮೀನು ಬಂತು ಎಂದರೆ ನನಗೆ ಗೊತ್ತಿಲ್ಲ. ಈ ಸಂಬಂಧವಾಗಿ ಡ ನಂಬರ 751 ಡ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಕೊಪ್ಪರಸಿಕೊಪ್ಪ ಗ್ರಾಮದ ಎಲ್ಲಾ ಜಮೀನುಗಳು 1974-75 ರಲ್ಲಿ ಹಿಸ್ಸೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಹಿಸ್ಸಾ ಪ್ರಕಾರ ತನಗೆ ಬಂದ ಜಮೀನುಗಳನ್ನು ತನ್ನ ತಂದೆಯವರೆ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

ಗಾಜಿಪುರ ಗ್ರಾಮದಲ್ಲಿಯೂ ಸಹ ನಮ್ಮ ಅಜ್ಜನ ಹೆಸರಿಗೆ ವ್ಯವಸಾಯದ ಜಮೀನುಗಳು ಇದ್ದವು ಎಂದರೆ ಸರಿ. ಅವುಗಳ ಸರ್ವೇ ನಂಬರ ನನಗೆ ಗೊತ್ತಿಲ್ಲ. ಸರ್ವೇ ನಂಬರ 21/2, 23, 25, 129, 22 ಮತ್ತು 75 ರ ಜಮೀನುಗಳು ನಮ್ಮ ಅಜ್ಜನ ಹೆಸರಿನಲ್ಲಿದ್ದವು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜನ ಹೆಸರಿನಲ್ಲಿ ಕೊಪ್ಪರಸಿಕೊಪ್ಪ ಗ್ರಾಮದ ಸರ್ವೇ ನಂಬರ 10/ಎ ಮತ್ತು 10/ಬಿ ರಲ್ಲಿ ನಿವೇಶನಗಳನ್ನಾಗಿ ಬಿನ್ ಶೇತ್ಕಿಯಾಗಿ ಪರಿವರ್ತಿಸಿ ಅವುಗಳ ವಿಪಿಸಿ ನಂಬರ 306, 307, 6/1, 307/1, 307/2, 307/3 ಮತ್ತು 308 ಆಸ್ತಿಗಳಿದ್ದು, ಅವುಗಳಲ್ಲಿ ಇದ್ದ ಕಟ್ಟಡ, ಶೆಡ್, ಮತ್ತು ನಿವೇಶನಗಳು ನನ್ನ ಅಜ್ಜನ ಹೆಸರಿನಲ್ಲಿದ್ದವು ಎಂದರೆ ಇರಬಹುದು. ಆದರೆ ನನಗೆ

ಗೊತ್ತಿಲ್ಲ. ನನ್ನ ಅಜ್ಜನಿಗೆ ಮುರು ಜನ ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳುಗಳು ವಾರಸುದಾರರಾಗಿದ್ದು, ಅವರುಗಳ ಪೈಕಿ ನನ್ನ ಅಜ್ಜಿ ವಾರಸುದಾರರು ಎಂದರೆ ಸರಿ .ನಾವುಗಳು 2000 ಇಸ್ವಿಯಂದು ಅಲ್ಪವಯಿಗಳಾಗಿದ್ದೆವು. ಆ ಅವಧಿಯಲ್ಲಿ ನಾನು ಮತ್ತು ನನ್ನ ತಂಗಿಯವರು ನನ್ನ ತಾಯಿಯ ಅಭಿರಕ್ಷಣೆಯಲ್ಲಿದ್ದೆವು. ನನ್ನ ತಾಯಿ ನಮ್ಮ ಮೂರು ಜನ ಹಿತಾಸಕ್ತಿಯನ್ನು ಕಾಳಜಿ ತೆಗೆದುಕೊಂಡು ನೋಡುತ್ತಾ ಬಂದಿದ್ದಾರೆ ಎಂದರೆ ಸರಿ. ನನ್ನ ತಾಯಿ ನನ್ನ ಮೂರು ಜನ ಹಿತಾಸಕ್ತಿಯ ವಿರುದ್ಧವಾಗಿ ಎಂದೂ ಸಹ ನಡೆದುಕೊಂಡಿಲ್ಲ. ನನ್ನ ತಾಯಿ 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ತಾಯಿ, ನನ್ನ ಅಜ್ಜ ಮತ್ತು 1 ನೇ ಪ್ರತಿವಾದಿಯರು ಕೂಡಿ ದಿಃ04-10-2000 ರಂದು ವಾಟ್ನಿ ಮಾಡಿಕೊಂಡು ಗಾಜಿಪುರ ಗ್ರಾಮದ ಜಮೀನುಗಳನ್ನು ನನ್ನ ತಾಯಿಯ ಹಿಸ್ಸೆಗೆ ಬಿಟ್ಟುಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಆ ವಾಟ್ನಿಯಂತೆ ಗಾಜಿಪುರ ಗ್ರಾಮದ ರಿ ಸ ನಂಬರ 21/2 ರಲ್ಲಿ 2 ಎಕರೆ 13 ಗುಂಟೇ, 23 ರಲ್ಲಿ 2 ಎಕರೆ 31 ಗುಂಟೆ, 25 ರಲ್ಲಿ 14 ಗುಂಟೆ, ಮತ್ತು ಕೊಪ್ಪರಸಿಕೊಪ್ಪ ಗ್ರಾಮದ ಸರ್ವೇ ನಂಬರ 120 ರಲ್ಲಿ 8 ಎಕರೆ 30 ಗುಂಟೆ ಮತ್ತು ಸರ್ವೇ ನಂಬರ 22 ರಲ್ಲಿ 3 ಎಕರೆ 36 ಗುಂಟೆ ಜಮೀನುಗಳು ನನ್ನ ತಾಯಿಯ ಹಿಸ್ಸೆಗೆ ಬಂದವು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನನ್ನ ಅಜ್ಜಿಯ ಹಿಸ್ಸೆಗೆ ಗಾಜಿಪುರ ಗ್ರಾಮದ ಸರ್ವೇ ನಂ ಬರ 70 ರಲ್ಲಿ 1 ಎಕರೆ 1 ಗುಂಟೆ ಜಮೀನು ಬಂತು ಎಂದರೆ ನನಗೆ ಗೊತ್ತಿಲ್ಲ. ಆ ವಾಟ್ನಿಯಂತೆ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದವು ಎಂದರೆ ಸರಿಯಲ್ಲ. ದಿಃ 04-10-2000 ದಂದು ಆದ ವಾಟ್ನಿ ಪತ್ರವನ್ನು ಹಾನಗಲ್ಲ ಉಪ ನೊಂದಣಾಧಿಕಾರಿ ಕಚೇರಿಯಲ್ಲಿ ನೊಂದಾಯಿಸಿದರು ಎಂದರೆ ಸರಿಯಲ್ಲ. ಆ ವಾಟ್ನಿಯಂತೆ ಗಾಜಿಪುರ ಮತ್ತು ಕೊಪ್ಪರಸಿಕೊಪ್ಪ ಜಮೀನುಗಳು ನನ್ನ ತಾಯಿಯ ಕಬ್ಜಾ ವಹಿವಾಟಿಯಲ್ಲಿವೆ ಎಂದರೆ ಸರಿ. ಅದೇ ರೀತಿ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಕಬ್ಜಾ ವಹಿವಾಟಿನಲ್ಲಿ ಇವೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೇ ನಂಬರ 70 ರ ಜಮೀನು ನನ್ನ ಅಜ್ಜಿಯ ಕಬ್ಜಾ ವಹಿವಾಟಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ರಿ ಸ ನಂಬರ 70 ರ 1 ಎಕರೆ 1 ಗುಂಟೆ ಜಮೀನಿನಲ್ಲಿ ಈಗ ಯಾರು ಕಬ್ಜಾ ವಹಿವಾಟು ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ರಿ ಸ ನಂಬರ 70 ರ 1 ಎಕರೆ 1 ಗುಂಟೆ ಜಮೀನನ್ನು ನನ್ನ ಅಜ್ಜಿ ಜೀವಂತ ಇದ್ದಾಗಲೇ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ 10 ಎ ಮತ್ತು 10 ಬಿ ರ ಆಸ್ತಿಗಳಲ್ಲಿ ಎನ್.ಎ ನಿವೇಶನಗಳಾಗಿ ಪರಿವರ್ತಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸಿಗಳಲ್ಲಿ ಆದ ನಿವೇಶನಗಳಲ್ಲಿ ಒಂದು ಮನೆ ಕಟ್ಟಲಾಗಿದೆ ಎಂದರೆ ಸರಿ. ಆ ನಿವೇಶನಗಳಿಗೆ ದಾವಾದಲ್ಲಿ

ನಮೂದಿಸಲಾದ ನಂಬರಗಳು ನೀಡಲಾಗಿದೆ ಎಂದರೆ ಇರಬಹುದು. ನನ್ನ ವಾದ ಪತ್ರದಲ್ಲಿ ದಾವಾ 10ಎ ಮತ್ತು 10ಬಿ ರ ಆಸ್ತಿಗಳು ಎನ್ ಎ ಆಸಿಗಳು ಎಂದು ಬರೆದಿರುತ್ತೇನೆ. 2000 ನೇ ಇಸ್ವಿಯಂದು ನನ್ನ ತಾಯಿ, ನನ್ನ ಅಜ್ಜಿ ಮತ್ತು 1 ನೇ ಪ್ರತಿವಾದಿಯ ನಡುವೆ ವಾಟ್ನಿಯಾಗಿದ್ದು, ಈ ಬಗ್ಗೆ ವಾಟ್ನಿ ಪತ್ರ ಉಪನೊಂದಣಾಧಿಕಾರಿಯ ಕಚೇರಿಯಲ್ಲಿ ನೊಂದ ಆಗಿರುತ್ತದೆ ಎಂದರೆ ಸರಿಯಲ್ಲ. ಆ ವಾಟ್ನಿಯಂತೆ ನಮ್ಮ ಹಿಸ್ಸೆಗೆ ಬಂದ ಜಮೀನಿನಲ್ಲಿ ನಾವುಗಳೇ ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ನನ್ನ ಅಜ್ಜನ ಕಾಲದಿಂದಲೂ ಸಹ ದಾವಾ ಆಸ್ತಿಗಳಲ್ಲಿ ಯಾವುದೇ ವಾಟ್ನಿಯಾಗಿರುವುದಿಲ್ಲ. ನನ್ನ ಅಜ್ಜ ಮೃತಪಟ್ಟ ನಂತರವೂ ಸಹ ನಮ್ಮ ಕುಟುಂಬದ ಆಸ್ತಿಗಳು ಹಿಸ್ಸೆಯಾಗದೇ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿಯೇ ಇದ್ದವೋ ಅಥವಾ ಇಲ್ಲವೋ ಎಂಬುದನ್ನು ನನಗೆ ಗೊತ್ತಿಲ್ಲ. ಈ ರೀತಿ ವಾಟ್ನಿಯಂತೆ ನಮ್ಮ ಕುಟುಂಬದಲ್ಲಿ ವಾಟ್ನಿಯಾಗಿ ಅದರಂತೆ ನಾವು ಪ್ರತ್ಯೇಕ ಕಬ್ಜಾ ವಹಿವಾಟು ಮಾಡುತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜನ ಕಾಲದಿಂದಲೂ ಸಹ ನಮ್ಮ ಕುಟುಂಬದಲ್ಲಿ ಎಷ್ಟು ಬಾರಿ ವಾಟ್ನಿಯಾಗಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಆಸ್ತಿಗಳಲ್ಲಿ ಹಾವೇರಿ ನ್ಯಾಯಾಲಯದಲ್ಲಿ 1974-75 ರಲ್ಲಿ ಒಂದು ಬಾರಿ ಮತ್ತು ದಿಃ04-10-2000 ದಂದು ಒಟ್ಟು ಎರಡು ಬಾರಿ ವಾಟ್ನಿಯಾಗಿದೆ ಎಂದರೆ ಸರಿಯಲ್ಲ. ದಿಃ04-10-2000 ದಂದು ನಮ್ಮ ಕುಟುಂಬದ ಎಲ್ಲಾ ಆಸ್ತಿಗಳಲ್ಲಿ ಹಿಸ್ಸೆ ಆಗಿದ್ದು, ಯಾವ ಆಸ್ತಿಯೂ ಸಹ ಹಿಸ್ಸೆ ಆಗದೇ ಬಾಕಿ ಉಳಿದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪ್ರತಿವಾದಿ ಸಲ್ಲಿಸಿರುವ ತಕರಾರನ್ನು ಓದಿ ತಿಳಿದುಕೊಂಡಿಲ್ಲ. ತಮ್ಮ ಲಿಖಿತ ಹೇಳಿಕೆಯಲ್ಲಿ ದಿಃ04-10-2000 ದಂದು ವಾಟ್ನಿಯಾಗಿದೆ ಎಂದು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಕುಟುಂಬದ ವ್ಯವಸಾಯದ ಜಮೀನುಗಳನ್ನು ಈಗಾಗಲೇ ನಮ್ಮ ಅಜ್ಜ ನನ್ನ ತಂದೆಗೆ ಬಿಟ್ಟುಕೊಟ್ಟಿರವುದರಿಂದ ಅವುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಯಾವ ದಾಖಲೆ ಆಧಾರದ ಮೇಲೆ ನನ್ನ ಅಜ್ಜ ನನ್ನ ತಂದೆಗೆ ಜಮೀನನ್ನು ಬಿಟ್ಟುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಎಂದೂ ಸಹ ನನ್ನ ತಂದೆಗೆ ಸರ್ವೇ ನಂಬರ 21, 23, 25, 129 ಮತ್ತು 22 ರ ಜಮೀನುಗಳನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವುಗಳು ನಮಗೆ ಬಂದ ಜಮೀನುಗಳನ್ನು ಬಿಟ್ಟು 1 ನೇ ಪ್ರತಿವಾದಿಗೆ ಸೇರಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸರಿ. ನನ್ನ ತಂದೆಗೆ ಶಾಂತಾ, ಗಿರಿಜಾ ಮತ್ತು ಅಣ್ಣಪೂರ್ಣ ಎಂಬ ಸಹೋದರಿ ಇದ್ದಾರೆ. ಅವರುಗಳ ಪೈಕಿ ಶಾಂತಾರವರು ಮೃತಪಟ್ಟಿರುತ್ತಾರೆ. ಅವರಿಗೆ ಮೂರು ಜನ ಮಕ್ಕಳುಗಳು ಇದ್ದಾರೆ. ಅವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ

ಮಾಡಿರುವುದಿಲ್ಲ ಕಾರಣ ನನ್ನ ಅಜ್ಜ ನನ್ನ ಗಂಡು ಮಕ್ಕಳಿಗೆ ಮಾತ್ರ ನಮ್ಮ ಕುಟುಂಬದ ಆಸ್ತಿಗಳಲ್ಲಿ ಹಿಸ್ಸೆ ಕೊಡುವಂತೆ ಹೇಳಿದ್ದು, ಆ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಈ ಬಗ್ಗೆ ನನ್ನ ಅಜ್ಜ ಯಾವುದೇ ದಾಖಲೆಗಳನ್ನು ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ನನಗೆ ಗೊತ್ತಿಲ್ಲ. ಈ ಬಗ್ಗೆ ಯಾವುದೇ ದಾಖಲೆಗಳನ್ನು ನನ್ನ ಅಜ್ಜ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು 1 ನೇ ಪ್ರತಿವಾದಿಗೆ ಹಿಸ್ಸೆ ಮೂಲಕ ಬಂದ ಆಸ್ತಿಗಳಾಗಿದ್ದು, ಅವುಗಳಲ್ಲಿ ನಮಗೆ ಯಾವುಕದೇ ಹಕ್ಕು ಇಲ್ಲ ಎಂಕದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳುಳ ದಾವೆ ಸಲ್ಲಿಸಿದ್ದೇನೆ ಎಂದೆರ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿಗೆ ಮಾರಾಟ ಮಾಡುವ ಹಕ್ಕು ಇದ್ದು, ಅವುಗಳ ಪೈಕಿ ಕೆಲವು ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದನ್ನು ಪ್ರಶ್ನಿಸುವ ಯಾವುದೇ ಅಧಿಕಾರ ನನಗೆ ಇಲ್ಲ ಎಂದರೆ ಸರಿಯಲ್ಲ.

**(1 ನೇ ಪ್ರತಿವಾದಿ ಪರ ಮಾಡಲಾದ ಪಾಟೀ ಸವಾಲನ್ನೇ 2 ರಿಂದ 5 ನೇ ಪ್ರತಿವಾದಿ ಪರ ಅಳವಡಿಸಿಕೊಳ್ಳಲು ಕೋರಿದ್ದು, ಅಳವಡಿಸಲಾಗಿದೆ.)**

: **ಮರುವಿಚಾರಣೆ** : **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ